ಅವಶ್ಯಕತೆ ಇಲ್ಲ. ನಾವು ಒಂದು ಕಡತವನ್ನು ಸಚಿವ ಸಂಪುಟದ ಮುಂದೆ ತರುತ್ತಿದ್ದೇವೆ. ಇನ್ನೊಂದು ಕಡತ ಹಣಕಾಸು ಇಲಾಖೆಯಲ್ಲಿದೆಯೆಂದು ಹೇಳಿದ್ದಾರೆ. ಇದನ್ನು ಮತ್ತೆ follow up ಮಾಡುವಂಥ ಕೆಲಸವನ್ನು ಮಾಡುತ್ತೇನೆ. ಈಗಾಗಲೇ ಇದು permanent affiliation ಆಗಿದೆ. ಇದರ ಬಗ್ಗೆ ವಿದ್ಯಾರ್ಥಿಗಳು ಯಾರು ಗಾಬರಿ ಪಡುವಂಥ ಅವಶ್ಯಕತೆ ಇಲ್ಲ, ಇದರ ಜೊತೆಗೆ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲೇ ನಮ್ಮಲ್ಲಿರುವಂಥ ನರ್ಸ್‌ಗಳು ಮತ್ತು ಡಾಕ್ಟರ್‌ಗಳು ಇವರಿಗೆ ಬೇಕಾದಂಥ quarters ಗಳು, ಇವೆಲ್ಲವನ್ನು ಈ ಯೋಜನೆಯಲ್ಲಿ ಜೋಡಿಸುವಂಥ ಕೆಲಸವಾಗಿದೆ. ಹಾಗಾಗಿ ಮುಂದಿನ ಹಣಕಾಸು ವರ್ಷದಲ್ಲಿ ಇದಕ್ಕೆ ಸಂಬಂಧಪಟ್ಟ ಕೆಲವು ಯೋಜನೆಗಳನ್ನು ಸಹ submit ಮಾಡಿದ್ದೇವೆ. ಅದನ್ನು ಸಹ ಮಾಡುತ್ತೇವೆ.

ಬೆಂಗಳೂರಿನ ಗಾಂಧಿಬಜಾರ್ ಮುಖ್ಯರಸ್ತೆಯಲ್ಲಿ 200ಕ್ಕೂ ಹೆಚ್ಚು ಬಡ ವ್ಯಾಪಾರಿಗಳು ಸುಮಾರು 50 ವರ್ಷಗಳಿಂದ ಹೂ, ಹಣ್ಣು, ತರಕಾರಿ ವ್ಯಾಪಾರ ಮಾಡಿಕೊಂಡಿದ್ದು, ದಿನಾಂಕ: 23-01-2012ರ ಮಧ್ಯರಾತ್ರಿ ಏಕಾಏಕಿ ಪೊಲೀಸ್ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಯಾವುದೇ ಸೂಚನೆ ಇಲ್ಲದೆ ಅಂಗಡಿಗಳನ್ನು ನೆಲಸಮ ಮಾಡಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಗಾಂಧಿಬಜಾರ್ ಮುಖ್ಯ ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ ವೃದ್ಧರೂ ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಬಡ ವ್ಯಾಪಾರಸ್ಥರು ಕಳೆದ 50 ವರ್ಷದಿಂದ ಹೂ ಹಣ್ಣು ಮತ್ತು ತರಕಾರಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದು, ದಿನಾಂಕ : 23.01.2012 ರಂದು ಮಧ್ಯರಾತ್ರಿ ಏಕಾಏಕಿ ಪೋಲೀಸ್ ಅಧಿಕಾರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಯಾವುದೇ ಸೂಚನೆ ಇಲ್ಲದೇ ಎಲ್ಲಾ ಅಂಗಡಿಗಳನ್ನು ನೆಲಸಮ ಮಾಡಿ ಸಾಮಾನುಗಳನ್ನು ತುಂಬಿಕೊಂಡು ಹೋಗಿರುವುದರಿಂದ ಮತ್ತು ಸದರಿ ಮಾರುಕಟ್ಟೆ ಸ್ಥಳವನ್ನು ಬೇರೆಯವರಿಗೆ ಪರಭಾರೆ ಮಾಡಿರುವುದರಿಂದ ಬಡ ವ್ಯಾಪಾರಸ್ಥರು ಬೀದಿ ಪಾಲಾಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ಬೆಂಗಳೂರು ಗಾಂಧಿ ಬಜಾರ್ ಮುಖ್ಯ ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ ವೃದ್ಧರೂ ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಬಡ ವ್ಯಾಪಾರಸ್ಥರು ಕಳೆದ 50

ವರ್ಷದಿಂದ ಹೂ, ಹಣ್ಣು ಮತ್ತು ತರಕಾರಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದು, ದಿನಾಂಕ 23–01–2012 ರಂದು ಮಧ್ಯರಾತ್ರಿ ಏಕಾಏಕಿ ಪೊಲೀಸ್ ಅಧಿಕಾರಿಗಳು ಮತ್ತು ಸರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಯಾವುದೇ ಸೂಚನೆ ಇಲ್ಲದೇ ಎಲ್ಲಾ ಅಂಗಡಿಗಳನ್ನು ನೆಲಸಮ ಮಾಡಿ ಅಲ್ಲಿದ್ದ ಎಲ್ಲಾ ಸಾಮಾನು ಮುಗ್ಗಟ್ಟುಗಳನ್ನು ತುಂಬಿಕೊಂಡು ಹೋಗಿರುವುದರಿಂದ ಮತ್ತು ಈ ಮಾರುಕಟ್ಟೆ ಸ್ಥಳವನ್ನು ಬೇರೆಯವರಿಗೆ ಪರಭಾರೆ ಮಾಡಿರುವುದರಿಂದ ಬಡ ವ್ಯಾಪರಸ್ಥರು ಬೀದಿ ಪಾಲಾಗಿದ್ದು, ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

ಗಾಂಧಿಬಜಾರ್ ಮುಖ್ಯರಸ್ತೆಯ ಟ್ಯಾಗೂರ್ ವೃತ್ತದಿಂದ ಡಿ.ವಿ.ಜಿ. ರಸ್ತೆವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಸುಮಾರು ಜನರು ಪಾದಚಾರಿ ರಸ್ತೆ ಮತ್ತು ರಸ್ತೆಯಲ್ಲಿ ವ್ಯಾಪಾರ ನಡೆಸುತ್ತಿದ್ದು, ಇತ್ತೀಚೆಗೆ ಇಂತಹ ವ್ಯಾಪಾರಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ರಸ್ತೆಯ ಮತ್ತು ಪಾದಚಾರಿ ಮಾರ್ಗದ ಅತಿಕ್ರಮಣ ಸಹ ಹೆಚ್ಚಾಗುತ್ತಿದ್ದು, ಈ ಅತಿಕ್ರಮಣದಿಂದಾಗಿ ಪಾದಚಾರಿಗಳ ಹಾಗೂ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ. ಹಲವಾರು ಅಪಘಾತಗಳು ಸಹ ಸಂಭವಿಸಿರುತ್ತವೆ. ಪಾರ್ಕಿಂಗ್ ಸ್ಥಳಗಳನ್ನು ಸಹ ಅತಿಕ್ರಮಗೊಳಿಸಿರುವ ಕಾರಣ ವಾಹನ ನಿಲುಗಡೆಗೂ ಸಹ ತೊಂದರೆಯುಂಟಾಗಿರುತ್ತದೆ.

ರಸ್ತೆ ಬದಿಯ ಚರಂಡಿಗಳಲ್ಲಿ ಸಂಪೂರ್ಣವಾಗಿ ತ್ಯಾಜ್ಯ ತುಂಬಿದ್ದು ಅನೈರ್ಮಲ್ಯ ವಾತಾವರಣ ಸೃಷ್ಟಿಯಾಗಿರುತ್ತದೆ. ಮಳೆ ಬೀಳುವ ಸಂದರ್ಭದಲ್ಲಿ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯದೇ ರಸ್ತೆ ಮೇಲೆ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ಅತೀವ ತೊಂದರೆಯಾಗುತ್ತಿದ್ದು, ಸಂಚಾರಿ ಪೊಲೀಸ್ ಇಲಾಖೆ ಸಹ ಆಗಿಂದಾಗ್ಗೆ ಪಾದಚಾರಿ ರಸ್ತೆ ಮತ್ತು ರಸ್ತೆ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸುವಂತೆ ಪಾಲಿಕೆಗೆ ಪತ್ರಗಳನ್ನು ಬರೆದಿರುತ್ತಾರೆ.

ಈ ಕಾರಣಗಳಿಂದ ಗಾಂಧಿಬಜಾರ್ ರಸ್ತೆ ಬದಿ ಮತ್ತು ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿಕೊಂಡು ವ್ಯಾಪಾರ ನಡೆಸುತ್ತಿದ್ದವರನ್ನು ಪಾಲಿಕೆ ಮತ್ತು ಪೊಲೀಸ್ ಇಲಾಖೆಯವರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿರುತ್ತಾರೆ. ತೆರವುಗೊಳಿಸಿರುವ ಸ್ಥಳವು ಪಾದಚಾರಿ ಮಾರ್ಗ ಹಾಗೂ ರಸ್ತೆ ಭಾಗವಾಗಿದ್ದು, ಯಾರಿಗೂ ಮಾರಾಟ ಮಾಡಿರುವುದಿಲ್ಲ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು Maharastra Ekta Hawkers Union Case & Another V/s Municipal Corporations, Greater Mumbai & others ಪ್ರಕರಣದಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ 14607/2008ರಲ್ಲಿ ನೀಡಿರುವ ಆದೇಶದನ್ವಯ ಸರ್ಕಾರವು ಪಾದಚಾರಿ ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿರುವವರನ್ನು ನಿಯಂತ್ರಿಸಲು, ನಿಯಮಿತಗೊಳಿಸಲು ಸಾರ್ವಜನಿಕ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ದಿನಾಂಕ 19-03-2010 ರಂದು ಸುತ್ತೋಲೆಯನ್ನು (ಸುತ್ತೋಲೆ ಸಂಖ್ಯೆ: ನಾಇ 18 ಎಂಎನ್‌ಜಿ 2009) ಹೊರಡಿಸಿರುತ್ತದೆ. ಅದರಂತೆ, ಪಾಲಿಕೆಯು ದಿನಾಂಕ 22-05-2010 ರಂದು ಒಂದು ಸುದೀರ್ಘವಾದ ಸುತ್ತೋಲೆಯನ್ನು ಹೊರಡಿಸಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಗಾಂಧಿಬಜಾರ್ ರಸ್ತೆ ಬದಿಯ ವ್ಯಾಪಾರಿಗಳ ಮನವಿಯನ್ನು ಪರಿಶೀಲಿಸಿ ಸರ್ಕಾರದ ನೀತಿಗೆ ಅನುಗುಣವಾಗಿ ಕ್ರಮಕೈಗೊಳ್ಳಲಾಗುವುದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಕೆಲವು ದಿವಸಗಳ ಹಿಂದೆ ಗಾಂಧಿಬಜಾರ್‌ನಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನೆಲ್ಲಾ ಒಕ್ಕಲೆಬ್ಬಿಸಿದ್ದಾರೆ. ಸುಮಾರು 500 ಜನ ಪೊಲೀಸರನ್ನು ಕರೆದುಕೊಂಡು ಹೋಗಿ, ಇಲ್ಲಿ 50 ವರ್ಷಗಳಿಂದ ವ್ಯಾಪಾರ ಮಾಡಿಕೊಂಡಿದ್ದರು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇವರು ಕಳೆದ 50 ವರ್ಷಗಳಿಂದ ವ್ಯಾಪಾರ ಮಾಡಿಕೊಂಡಿದ್ದರು. ಇವರನ್ನು ಏಕಾಏಕಿ ರಾತ್ರಿ ವೇಳೆಯಲ್ಲಿ ಹೊರಗೆ ಹಾಕಿದ್ದಾರೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಮುಖ್ಯಮಂತ್ರಿಯವರೆ, ಇವರು ಕಳೆದ 50 ವರ್ಷಗಳಿಂದ ಗಾಂಧಿಬಜಾರ್‌ನಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ಕಾರ್ಪೊರೇಷನ್‌ರವರು ಮತ್ತು ಪೊಲೀಸ್‌ನವರು ಸೇರಿಕೊಂಡು ಹೊರ ಹಾಕಿದ್ದಾರೆ. ಸುಮಾರು 200 ಕುಟುಂಬಗಳು ಇದರ ಮೇಲೆ dependಆಗಿದ್ದವರು, ಸುಮಾರು 60 ಜನರಿಗೆ ಲೈಸನ್ಸ್ ಕೂಡ ಕೊಟ್ಟಿದ್ದಾರೆ ಅವರಿಗೆ ಯಾವುದೇ alternative arrangement ಅನ್ನೂ ಮಾಡದೇ, ಏಕಾಏಕಿ ಹೋಗಿ ಅವರ ಅಂಗಡಿಗಳನ್ನು ನೆಲಸಮ ಮಾಡಿ ಅವರನ್ನು ಬೀದಿಪಾಲು ಮಾಡಿಬಿಟ್ಟರೆ, where

they should go? As a matter of fact, in 1994 when Sri Ramakrishna Hegde was in power as Chief Minister of Karnataka, ಇವರಿಗೆ ಬೇರೆ ಒಂದು ಮಾರುಕಟ್ಟೆ ಮಾಡಿಕೊಡಲು ಶಂಕು ಸ್ಥಾಪನೆಯನ್ನೂ ಮಾಡಿದ್ದರು ಮತ್ತು ಎಸ್.ಎಂ. ಕೃಷ್ಣರವರ ಕಾಲದಲ್ಲೂ ಸಹ ಇವರಿಗೆ ಕಾರ್ಪೊರೇಷನ್ ಜಾಗದಲ್ಲೇ ಬೇರೆ ಮಾರುಕಟ್ಟೆ ಮಾಡಿಕೊಡಬೇಕು ಎಂದು ಆಗಿತ್ತು. ಈಗ ಅದೆಲ್ಲವನ್ನೂ ಬಿಟ್ಟು, ಅವರನ್ನು ಬೀದಿಪಾಲು ಮಾಡಿಬಿಟ್ಟರೆ, where they should go? ಅಧಿಕಾರಿಗಳಿಗೆ ಕಾನೂನು, ರೂಲ್ಸೂ ಇರುವುದಿಲ್ಲ, ಅವರಿಗೆ ಮಾನವೀಯತೆಯೂ ಇರುವುದಿಲ್ಲ. "ಎತ್ತು ಈಯಿತು, ಕೊಟ್ಟಿಗೆಗೆ ಕಟ್ಟು" ಎಂದು ಯಾರೋ ಹೇಳಿದರೆ, ಅದನ್ನು ತೆಗೆದುಕೊಂಡು ಹೋಗಿ ಕೊಟ್ಟಿಗೆಗೆ ಕಟ್ಟಿಬಿಡುತ್ತಾರೆ. ಎತ್ತು ಈಯುತ್ತದೆಯೋ, ಇಲ್ಲವೋ ಎನ್ನುವುದೂ ಅವರಿಗೆ ಗೊತ್ತಿರುವುದಿಲ್ಲ. ಎತ್ತು ಈಯಿತು ಎಂದ ತಕ್ಷಣ ಓಡಿ ಹೋಗುವಂಥ ರೀತಿಯಲ್ಲಿ ಇವರು ಮಾಡುತ್ತಾರೆ ಸುಮಾರು 200 ಕುಟುಂಬಗಳು ಅದನ್ನೇ ನಂಬಿಕೊಂಡಿದ್ದರು ಎಂದರೆ, ಒಂದು ಕುಟುಂಬದಲ್ಲಿ ಮೂರ್ನಾಲ್ಕು ಜನರಿದ್ದರು ಎಂದರೆ ಒಟ್ಟು ಎಷ್ಟು ಜನರು ಬೀದಿಪಾಲಾಗುತ್ತಾರೆ? ಅಲ್ಲದೇ, ಅವರಿಗೆ ಬೇರೆ ಯಾವ ಕೆಲಸವೂ ಗೊತ್ತಿಲ್ಲ ಮತ್ತು ಅಲ್ಲಿರುವವರು ಎಲ್ಲೆಲ್ಲಿಂದಲೋ ವಲಸೆ ಬಂದಿರುವರಾಗಿದ್ದಾರೆ. ಅಲ್ಲಿ ಅವರು 50 ವರ್ಷಗಳಿಂದ ವ್ಯಾಪಾರವನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡಿರುವುದರಲ್ಲಿ ನ್ಯಾಯ ಇದೆಯೇ ಹೇಳಿ, ಮುಖ್ಯಮಂತ್ರಿಗಳೆ? ಅಲ್ಲಿ ಟ್ರಾಫಿಕ್‌ಗೆ ತೊಂದರೆಯಾಗುತ್ತದೆ, ಜನಗಳಿಗೆ ಓಡಾಡಲು ತೊಂದರೆಯಾಗುತ್ತದೆ ಎಂದರೆ ಅವರನ್ನು ತೆರವು ಮಾಡಬೇಕು ನಿಜ. ಆದರೆ ಆವತ್ತಿನಿಂದ ಅವರಿಗೆ ವ್ಯಾಪಾರ ಮಾಡಲು ಒಂದು alternative arrangement ಮಾಡಿಕೊಡುತ್ತೇವೆ ಎಂದು ಹೇಳಿ, 1994 ರಿಂದ ಬೇರೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ, ಅದನ್ನು ಮಾಡದೇ, ಯಾವುದೇ ನೋಟಿಸ್ ಕೊಡದೇ ಇದ್ದಕ್ಕಿದ್ದ ಹಾಗೆ ಬೀದಿಪಾಲು ಮಾಡಿಬಿಟ್ಟರೆ ಅವರು ಎಲ್ಲಿಗೆ ಹೋಗಬೇಕು? ಅಲ್ಲಿ ಅವರು ಹಣ್ಣುಗಳು, ಹೂವು, ತರಕಾರಿಗಳನ್ನು ಮಾರಾಟ ಮಾಡುತ್ತಿದ್ದರು. ಅವರಿಗೆ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಅಲ್ಲಿದ್ದ ಹೂವು, ಹಣ್ಣುಗಳು, ತರಕಾರಿಗಳನ್ನೆಲ್ಲ ಕಾರ್ಪೊರೇಷನ್ನಿನವರು ತುಂಬಿಕೊಂಡು ಹೋಗಿದ್ದಾರೆ. ಅದನ್ನು ವಾಪಸ್ಸು ಕೊಡತಕ್ಕಂಥ ಮಾನವೀಯತೆಯೂ ಅವರಿಗಿಲ್ಲ. ಕಳೆದ 15 ದಿನಗಳಿಂದ ಅವರು ಸ್ಟ್ರೈಕ್ ಕುಳಿತಿದ್ದಾರೆ, ಧರಣಿ ಮಾಡುತ್ತಿದ್ದಾರೆ, ಅಲ್ಲಿಗೆ ಯಾರೂ ಹೋಗಿ ನೋಡುವುದಿಲ್ಲ, ಅವರ ಕಷ್ಟವನ್ನು ಯಾರೂ ಕೇಳುವುದಿಲ್ಲ. ಈ ಸರ್ಕಾರ ತನಗೆ ಕಣ್ಣು, ಕಿವಿ, ಮುಂತಾದ ಪಂಚೇಂದ್ರಿಯಗಳಿವೆ ಎಂದು ಹೇಳುತ್ತದೆ. ಅಧರೆ ಆ ಪಂಚೇಂದ್ರಿಯಗಳು ಕೆಲಸ ಮಾಡದಿದ್ದರೆ

ಏನು ಮಾಡಬೇಕು? ಈ ರೀತಿಯಾದರೆ ಬಹಳ ಕಷ್ಟ. ಆದ್ದರಿಂದ ಪಂಚೇಂದ್ರಿಯಗಳು ಕೆಲಸ ಮಾಡಬೇಕೆಂದು ಹೇಳಬೇಕು. Till the alternative arrangement is made, ಹಿಂದೆ ಅವರು ಎಲ್ಲಿ ವ್ಯಾಪಾರ ಮಾಡುತ್ತಿದ್ದರೋ ಅಲ್ಲೇ ವ್ಯಾಪಾರ ಮಾಡುವುದಕ್ಕೆ ದಯವಿಟ್ಟು ಮುಖ್ಯಮಂತ್ರಿಗಳು ಬಿಡಬೇಕು. ಎಸ್.ಎಂ. ಕೃಷ್ಣರವರ ಕಾಲದಲ್ಲಿ ಕಾರ್ಪೊರೇಷನ್ ಜಾಗದಲ್ಲಿ ಒಂದು ಮಾರುಕಟ್ಟೆ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ರಾಮಕೃಷ್ಣ ಹೆಗಡೆಯವರ ಕಾಲದಲ್ಲೂ ಸಹ ಒಂದು ಮಾರುಕಟ್ಟೆ ಮಾಡಲು ಗುದ್ದಲಿ ಪೂಜೆಯನ್ನು ಮಾಡಿದ್ದರು. ಆದರೆ ಮುಂದೆ ಅದನ್ನು ಏನೂ ಮಾಡದೇ ಹಾಗೇ ನಿಲ್ಲಿಸಿಬಿಟ್ಟಿದ್ದಾರೆ. ಹಾಗಾಗಿ, ಇದು ಕಾರ್ಪೊರೇಷನ್ ತಪ್ಪೇ ಹೊರತು ಅವರದಲ್ಲ. ಕಾರ್ಪೊರೇಷನ್ನಿನವರು ಎಷ್ಟು ಹೊತ್ತಿಗಾಗಲೇ ಅವರಿಗೆ ಬೇರೆ ವ್ಯವಸ್ಥೆ ಮಾಡಿಕೊಡಬೇಕಾಗಿತ್ತು. ಆದರೆ ಇನ್ನೂ ಮಾಡಿಲ್ಲ. ಹಾಗಾಗಿ ಅವರಿಗೆ ಕಾನೂನಿನ ಪ್ರೊಟೆಕ್ಷನ್ ಕೊಡಬೇಕಾಗುತ್ತದೆ. In the interest of natural justice ಅವರಿಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮುಖ್ಯಮಂತ್ರಿಗಳು ಇದನ್ನು ಸ್ವಲ್ಪ ಮಾನವೀಯತೆಯ ದೃಷ್ಟಿಯಿಂದ ನೋಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಸಭಾಧ್ಯಕ್ಷರೆ, ಗಾಂಧಿಬಜಾರ್‌ನಲ್ಲಿ ಏನೊಂದು ಘಟನೆಯಾಗಿದೆ, ಆಗ ಸುಮಾರು 200 ಪಟ್ಟಿ ಬಿಸಿನೆಸ್ ಮಾಡುತ್ತಿದ್ದಂಥ ಅಂಗಡಿಗಳನ್ನು ರಾತ್ರೋರಾತ್ರಿ ಬಂದು ಗಲಾಟೆ ಮಾಡಿ ಖಾಲಿ ಮಾಡಿಸಿದ್ದಾರೆ. ಅದಾದ ಮೇಲೆ, ಇಡೀ ಬೆಂಗಳೂರು ನಗರದಲ್ಲಿ ಒಂದು ಭಯದ ವಾತಾವರಣವಿದೆ. ಬೆಂಗಳೂರಿನ ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಮಾಡುವಂಥವರು, ಪೊಲೀಸಿನವರು ಯಾವಾಗ ಬರುತ್ತಾರೋ, ಯಾವಾಗ ನಮ್ಮನ್ನು ಅಲ್ಲಿಂದ ಎತ್ತಂಗಡಿ ಮಾಡಿಸುತ್ತಾರೋ ಎನ್ನುವ ಭಯದಲ್ಲಿದ್ದಾರೆ. ಯು.ಪಿ.ಎ. ಸರ್ಕಾರದವರು ಒಂದು ಹೊಸ ಪಾಲಿಸಿಯನ್ನು ತರುತ್ತಿದ್ದಾರೆ. ಪಾರ್ಲಿಮೆಂಟಿನಲ್ಲಿ ಒಂದು ಹೊಸ ಬಿಲ್ ಬರುತ್ತಿದೆ. ಅದೇನೆಂದರೆ, in all urban pockets, including Bangalore city, 2.5% ಜಾಗವನ್ನು ಅವರಿಗೆ ಬಿಡಬೇಕು ಎಂದು ಹೇಳಿ, ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುವವರಿಗೆ 2.5% ಜಾಗವನ್ನು ರಿಸರ್ವ್ ಮಾಡಬೇಕೆಂದು Vendor Policy introduce ಆಗುತ್ತಿದೆ. ಆ ಹಿನ್ನೆಲೆಯಲ್ಲಿ ಹಿಂದೆ ಅಲ್ಲಿ ಯಾರು ವ್ಯಾಪಾರ ಮಾಡುತ್ತಿದ್ದರೋ ಅವರಿಗೆ ಆ ಜಾಗವನ್ನು ವಾಪಸ್ಸು ಕೊಡಬೇಕು. ಟ್ರಾಫಿಕ್‌ಗೆ ತೊಂದರೆಯಾಗದ ಹಾಗೆ ಅವರು ವ್ಯಾಪಾರ ಮಾಡಿಕೊಳ್ಳಲಿ. ಬಡವರಾದ ಅವರು ಬೀದಿ ಪಾಲಾಗಬೇಕೇ? ದಯವಿಟ್ಟು ಮುಖ್ಯಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕು.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಅಲ್ಲಿ ಅವರು ಧರಣಿ ಮಾಡುತ್ತಿದ್ದಾರೆ. ಇನ್ನೂ ಕೂಡ ಅವರಿಗೆ ಯಾವುದೇ ಪ್ರತಿಕ್ರಿಯೆ ಸರಿಯಾದ ರೀತಿಯಲ್ಲಿ ಸಿಕ್ಕಿಲ್ಲ. ಈಗ ಬಿ.ಬಿ.ಎಂ.ಪಿ.ಯವರು, ನಾವು ಅವರಿಗೆ ಪರ್ಯಾಯ ಕಟ್ಟಡ ಕಟ್ಟಿ ಅವರಿಗೆ ಬೇರೆ ಜಾಗ ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದನ್ನು ಅವರು ಮೊದಲೇ ಮಾಡಿ ನಂತರ ಅಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನು ಸ್ಥಳಾಂತರ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಅದನ್ನು ಮಾಡದೇ, ನೀವು ಒಂದೇ ಸಲ ಜೆ.ಸಿ.ಬಿ.ಗಳನ್ನು ತಂದು ಅವರನ್ನು ಅಲ್ಲಿಂದ ಆಚೆ ಹಾಕುವುದನ್ನು ಮಾಡಿ, ಈಗ ನಾವು ನಿಮಗೆ ಹೊಸ ಕಟ್ಟಡ ಕಟ್ಟಿಕೊಡುತ್ತೇವೆ ಎಂದರೆ ಆಗುತ್ತದೆಯೇ? ಮೊದಲೇ ಎಲ್ಲರನ್ನೂ ಒಟ್ಟಿಗೆ ಸೇರಿಸಿ, ಚರ್ಚೆ ಮಾಡಿ ಮಾಡಬೇಕಾಗಿತ್ತು. ಇವತ್ತು ಅವರು ನಿರ್ಗತಿಕರಾಗಿದ್ದಾರೆ. ಅವರಿಗೆ ಯಾವುದೇ ದುಡಿಮೆ ಇಲ್ಲ, ಹಣ ಇಲ್ಲ. ಇದೇ ರೀತಿ ಮುಂದುವರೆದರೆ ಕೆಲವು ಆತ್ಮಹತ್ಯೆಗಳಾಗುವಂಥ ಪರಿಸ್ಥಿತಿಯೂ ಉದ್ಭವವಾಗುತ್ತದೆ. ಆದ್ದರಿಂದ ಇಂಥ ವಿಚಾರಗಳನ್ನು ಬಹಳ ಸೂಕ್ಷ್ಮವಾಗಿ ಮಾಡಬೇಕಾಗುತ್ತದೆ. ಬಿ.ಬಿ.ಎಂ.ಪಿ.ಯವರು ಸರಿಯಾಗಿ ಕೆಲಸ ಮಾಡಲಿಲ್ಲ. ನಾವು ಹೊಸ ಕಟ್ಟಡ ಕಟ್ಟುತ್ತೇವೆ ಎಂದು ಈಗ ಹೇಳುತ್ತಿದ್ದಾರೆ. ಅಲ್ಲಿ ವ್ಯಾಪಾರಸ್ಥರು ಈಗಲೂ ಕೂಡ ಧರಣಿ ಮಾಡುತ್ತಿದ್ದಾರೆ. ಆದ್ದರಿಂದ ಕೂಡಲೇ ತಾವು ಒಂದು ಭರವಸೆಯ ಮಾತನ್ನು ಈ ಅಸೆಂಬ್ಲಿ ಮೂಲಕ ಅವರಿಗೆ ರವಾನೆ ಮಾಡುವಂಥ ಕೆಲಸವನ್ನು ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಈ ಹಿಂದೆಯೇ ಕುಮಾರಸ್ವಾಮಿಯವರ ಸರ್ಕಾರವಿದ್ದಾಗಲೇ ಅದನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೆವು. ಅಲ್ಲಿ ವ್ಯಾಪಾರ ಮಾಡುತ್ತಿದ್ದವರು ಬಡವರು, ಈ ರೀತಿ ಸುಮಾರು 200 ಕುಟುಂಬಗಳಿವೆ. ಆದ್ದರಿಂದ, ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಒಂದು ಜಾಗ ಮಾಡಿಕೊಡಿ. ಅದಕ್ಕೆ ಅಗ್ರೀಮೆಂಟ್ ಸಹ ಆಗಿದೆ.

ಶ್ರೀ ಯು.ಟಿ. ಖಾದರ್ : ಮಂಗಳೂರು ಸಿಟಿ ಕಾರ್ಪೊರೇಷನ್ನಿನಲ್ಲೂ ಇದೇ ಪರಿಸ್ಥಿತಿಯಾಗಿದೆ. ಅವರಿಗೆ ಸ್ವಲ್ಪ ಮಾನವೀಯತೆ ತೋರಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಮಂಗಳೂರಿನವರನ್ನು ಬೇರೆ ರೀತಿಯಲ್ಲಿ ತನ್ನಿ, ಇದು ಬೆಂಗಳೂರಿನದು.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಒಂದು ಸಬ್ಮಿಷನ್ ಇದೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೇ ಹೇಳಿದ್ದಾರೆ. ಮತ್ತೆ ನೀವು ಹೇಳಿದ್ದನ್ನೇ ಹೇಳುತ್ತೀರಿ.

ಶ್ರೀ ಸಿ.ಟಿ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಬೆಂಗಳೂರು ನಗರದಲ್ಲಿ ಮಾಲ್ ಸಂಸ್ಕೃತಿ ಬರುತ್ತಿದೆ. ಆದರೆ ಇಲ್ಲಿ ವ್ಯಾಪಾರ ಮಾಡುತ್ತಿದ್ದಂಥವರಲ್ಲಿ ಬಹಳಷ್ಟು ಜನ ವಂಶಪಾರಂಪರ್ಯವಾಗಿ ಅಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಇವರ್ಯಾರಿಗೂ ಮಾಲ್‌ಗಳಲ್ಲಿ ಅಂಗಡಿಗಳನ್ನು ಕೊಂಡುಕೊಳ್ಳಲು ಶಕ್ತಿಯಿಲ್ಲ ಮತ್ತು ಇವತ್ತು ಹೊಸದಾಗಿ ಮಾರುಕಟ್ಟೆಗಳೂ ನಿರ್ಮಾಣವಾಗುತ್ತಿಲ್ಲ. Supreme Court ನಿರ್ದೇಶನದಂತೆ Hawking Zone ಗಳನ್ನು ಮಾಡಿಸಿ. ಪ್ರತಿ ಬಡಾವಣೆಗಳಲ್ಲೂ ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಮಾಡುವಂಥ ಅನಿವಾರ್ಯ ಸ್ಥಿತಿ ಬರುತ್ತಿದೆ. ಆದ್ದರಿಂದ Hawking Zone ಗಳನ್ನು ಮತ್ತು timings ಅನ್ನು ನಿಗದಿ ಮಾಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ರೀತಿ ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಮಾಡುವಂಥವರು ಅಥವಾ ಮಾರ್ಗದ ಬದಿಯಲ್ಲಿ ವ್ಯಾಪಾರ ಮಾಡುವಂಥವರ ಬಗ್ಗೆ ಖಂಡಿತವಾಗಿಯೂ ಈ ಸರ್ಕಾರಕ್ಕೆ ಕಾಳಜಿ ಇದೆ. ಇಲ್ಲ ಎಂದು ಹೇಳುವುದು ಸರಿಯಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎನ್ನುವುದು ನಮಗೆಲ್ಲ ಗೊತ್ತಿರುವಂಥಾದ್ದೇ ಮತ್ತು ನಮ್ಮ ಕಣ್ಣೆದುರಿಗಿರುವ ಸಂಗತಿಗಳೇ ಆಗಿವೆ. ಗಾಂಧಿ ಬಜಾರ್ ಮುಖ್ಯರಸ್ತೆಯ ಟ್ಯಾಗೂರ್ ವೃತ್ತದಿಂದ ಡಿ.ವಿ.ಜಿ. ರಸ್ತೆಯವರೆಗೆ ಎರಡೂ ಬದಿಗಳಲ್ಲಿ ರಸ್ತೆ ವ್ಯಾಪಾರ ಮಾಡುತ್ತಿದ್ದುದನ್ನು ನಾವು ಬಹಳ ಸಮಯದಿಂದ ಕಂಡಿದ್ದೇವೆ. ಇದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇವುಗಳನ್ನು ಖಾಲಿ ಮಾಡಿಸಬೇಕು, ಇದರಿಂದ ಪಾದಚಾರಿಗಳಿಗೆ ತೊಂದರೆಯಾಗಬಾರದು, ಪಾರ್ಕಿಂಗ್ ವ್ಯವಸ್ಥೆಗೆ ತೊಂದರೆಯಾಗಬಾರದು ಎನ್ನುವುದಿದ್ದರೂ ದಿನನಿತ್ಯ ಇದರ ಬಗ್ಗೆ ಸಾರ್ವಜನಿಕರಿಂದ, ದಿನನಿತ್ಯ ಅಲ್ಲಿ ಓಡಾಟ ಮಾಡುವವರಿಂದ ಮತ್ತು ಬಾಕಿಯವರಿಂದ ಕಂಪ್ಲೇಂಟ್ ಬಂದಿರುವುದನ್ನು ನಾವು ನೋಡಿದ್ದೇವೆ. ಇಂಥ ವ್ಯಾಪಾರಿಗಳ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿರುವುದನ್ನೂ ನಾವು ನೋಡುತ್ತಿದ್ದೇವೆ. ಬೇರೆಬೇರೆ ಕಡೆಗಳಿಂದ ಬೆಂಗಳೂರಿಗೆ ವಲಸೆ ಬಂದು ಇಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರಿಂದ ಪಾದಚಾರಿಗಳಿಗೆ ಮತ್ತು ವಾಹನಗಳ ಓಡಾಟಕ್ಕೆ ತೊಂದರೆಯಾಗಿದೆ. ಹಲವಾರು ಅಪಘಾತಗಳು ಕೂಡ

ಆಗಿರುವುದೂ ನಮ್ಮ ಕಣ್ಣೆದುರಿಗೇ ಇದೆ. ಇವರು ಪಾರ್ಕಿಂಗ್ ಸ್ಥಳವನ್ನು ಕೂಡ ಪೂರ್ತಿ ಆಕ್ರಮಣ ಮಾಡಿಕೊಂಡಿರುವುದನ್ನು ನಾವು ಕಂಡಿದ್ದೇವೆ. ಇದರಿಂದಾಗಿ ರಸ್ತೆ ಬದಿಯ ಚರಂಡಿಗಳು ಕೂಡ ಸಂಪೂರ್ಣವಾಗಿ ತ್ಯಾಜ್ಯದಿಂದ ತುಂಬಿ, ನೈರ್ಮಲ್ಯಕ್ಕೆ ತೊಂದರೆಯಾಗುತ್ತಿದೆ. ಇದರಿಂದ ನೀರು ಚರಂಡಿಗಳಲ್ಲಿ ಸರಾಗವಾಗಿ ಹರಿಯದೇ, ಮಳೆಗಾಲ ಬಂದರೆ ಬೆಂಗಳೂರಿನಲ್ಲಿ ದೊಡ್ಡ ಪ್ರವಾಹ ಬರುವುದನ್ನು ನಾವು ನೋಡುತ್ತಿದ್ದೇವೆ. ಇದರಿಂದಾಗಿ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದನ್ನು ನಾವು ಕಂಡಿದ್ದೇವೆ. ಸಂಚಾರಿ ಪೊಲೀಸ್ ಇಲಾಖೆಯವರು ಆಗಿಂದಾಗ್ಗೆ ಇದನ್ನು ತೆರವುಗೊಳಿಸಬೇಕೆಂದು ಪಾಲಿಕೆಗೆ ಪತ್ರಗಳನ್ನು ಬರೆದದ್ದೂ ಇದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು Maharastra Ekta Hawkers Union Case & Another V/s Municipal Corporations, Greater Mumbai & others ಪ್ರಕರಣದಲ್ಲಿ ಇಡೀ ದೇಶಕ್ಕೆ ಅನ್ವಯವಾಗುವಂಥ ಒಂದು ಆದೇಶವನ್ನು ಮಾಡಿದೆ. ಅದೇ ರೀತಿ ಕರ್ನಾಟಕದಲ್ಲಿ ಕೂಡ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ 14607/2008ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಆದೇಶ ನೀಡಿ, ಸಾರ್ವಜನಿಕ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಇದನ್ನು ನಿಯಂತ್ರಣ ಮಾಡಬೇಕೆನ್ನುವ ಆದೇಶವನ್ನು ಮಾಡಿರುವುದೂ ನನ್ನ ಮುಂದೆ ಇದೆ. ಹಾಗಾಗಿ ನಾವು ಸರ್ಕಾರದ ವತಿಯಿಂದ ದಿನಾಂಕ 19–3–2010ರಂದು ಒಂದು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಮತ್ತು ದಿನಾಂಕ 22–5–2010ರಂದು ಪಾಲಿಕೆಯು ಮತ್ತೊಂದು ಸುದೀರ್ಘವಾದ ಸುತ್ತೋಲೆಯನ್ನು ಹೊರಡಿಸಿದೆ. ನಮ್ಮದು I.T. city, ವಿದೇಶಿಯರು ಮುಂತಾದವರು ಬರುವಂಥ ಸಿಟಿ. ಪಾದಚಾರಿಗಳಿಗೆ ಮತ್ತು ವಾಹನಗಳ ಓಡಾಟಕ್ಕೆ ತೊಂದರೆಯಾಗದಿರುವುದನ್ನು ನೋಡುವಂಥ ಜವಾಬ್ದಾರಿಯೂ ನಮ್ಮ ಮೇಲಿದೆ. ಇದರ ಅರ್ಥ, ಅಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ನಾವು ಏಕ್‌ದಂ ಉಪದ್ರವ ಕೊಡಬೇಕು ಅಥವಾ ಮತ್ತೊಂದು ತೊಂದರೆ ಕೊಡಬೇಕು ಎನ್ನುವುದಲ್ಲ. ಈಗಾಗಲೇ ಅವರು ಕೊಟ್ಟಂಥ ಮನವಿಯನ್ನು ನಮ್ಮ ಬಿ.ಬಿ.ಎಂ.ಪಿ. ಪರಿಶೀಲನೆ ಮಾಡುತ್ತದೆ. ಅವರಿಗೆ ಬದಲಿ ವ್ಯವಸ್ಥೆಯನ್ನು ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಅವರಿಗೆ ಕೊಟ್ಟು, ಆ ಪ್ರಕ್ರಿಯೆಗಳನ್ನೂ ಪ್ರಾರಂಭ ಮಾಡಿದ್ದೇವೆ. ಬೆಂಗಳೂರಿನ ಹಿತದೃಷ್ಟಿಯಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ, ಆರೋಗ್ಯದ ಹಿತದೃಷ್ಟಿಯಿಂದ, ಪಾದಚಾರಿಗಳ ಹಿತದೃಷ್ಟಿಯಿಂದ ಮತ್ತು ಬೆಂಗಳೂರು ನಗರ I.T., B.T. city ಎಂದು ಹೇಳುವ ಹಿನ್ನೆಲೆಯಲ್ಲಿ ಸೂಕ್ತ ಕೆಲಸ ಕಾರ್ಯಗಳನ್ನು ಮಾಡಲಾಗಿದೆ. ಅವರಿಗೆ ಸೂಕ್ತ ವ್ಯವಸ್ಥೆಗಳನ್ನು ಮಾಡಲು ಸರ್ಕಾರ ಬದ್ಧವಾಗಿದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕಾರ್ಪೊರೇಷನ್ನಿನ ಕಮೀಷನರ್‌ರವರು ಉತ್ತರ ಕೊಟ್ಟಹಾಗೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ಹೇಗೆ? I never expected. ಪಾಲಿಕೆಯವರು ದಿನಾಂಕ 22-05-2010ರಂದು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವವರಿಗೆ, ಪಾದಚಾರಿ ರಸ್ತೆಯಲ್ಲಿ ವ್ಯಾಪಾರ ಮಾಡುವವರನ್ನು ನಿಯಂತ್ರಿಸಲು, ಅವರಿಗೆ ಸುರಕ್ಷತೆ ಕೊಡಲು court decision ಪ್ರಕಾರ ಒಂದು ಸುತ್ತೋಲೆ ಹೊರಡಿಸಿದ್ದಾರೆ. ಆ ಸುತ್ತೋಲೆ ಹೊರಡಿಸಿದ್ದು ದಿನಾಂಕ: 19.3.2010ರಂದು. ಅವರಿಗೆ ಇವತ್ತಿನವರೆಗೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಿ ಆಮೇಲೆ ಕಿತ್ತುಹಾಕಬಹುದಿತ್ತಲ್ಲ? So, my request to Government is, ಅವರಿಗೆ as per the Circular of the Government ಪರ್ಯಾಯ ವ್ಯವಸ್ಥೆ ಮಾಡಿ. Till then let them continue their business. ಅದು ಮಾಡುವವರೆಗೆ ಅವರು ವ್ಯಾಪಾರ ಮಾಡಲಿ. ನಾನೂ ಗಾಂಧಿಬಜಾರ್ ನೋಡಿದ್ದೇನೆ. ಅಲ್ಲಿ ವಿದ್ಯಾರ್ಥಿ ಭವನ ಹೋಟೆಲ್ ಇದ್ದು ಅಲ್ಲಿಗೆ ದೋಸೆ ತಿನ್ನಲು ಹೋಗುವವರು ಹೆಚ್ಚು ಜನ ಇದ್ದಾರೆ. ಇಡ್ಲಿ, ದೋಸೆ ತಿನ್ನುವುದಕ್ಕೆ ಹೋಗುವವರು ಯಾರೋ complaint ಮಾಡಿರಬೇಕು. ಅಲ್ಲಿ ಅಷ್ಟೊಂದು traffic ಇಲ್ಲ. ಅಲ್ಲಿ ಸುತ್ತಮುತ್ತ ವ್ಯಾಪಾರ ಮಾಡುವವರೇ ಜಾಸ್ತಿಯಿದ್ದಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರು on humanitarian ground and also in accordance with the Circular issued by the Government of Karnataka and in view of the decision,- Vendor policy ಎಲ್ಲಾ ಜಾರಿ ಮಾಡಬೇಕು. ಆ ವ್ಯಾಪಾರಸ್ಥರು ಅಲ್ಲಿಯೇ ಇರಬೇಕೆಂದು ನಾನು ಹೇಳುವುದಿಲ್ಲ, ಅವರು ಗಾಂಧಿಬಜಾರ್‌ನಲ್ಲಿಯೇ permanent ಆಗಿ ಇರಬೇಕೆಂದು I do not suggest. ಪರ್ಯಾಯ ವ್ಯವಸ್ಥೆ ಮಾಡುವವರೆಗೆ ಅವರು ಅಲ್ಲಿಯೇ ಇರಲಿ, ಮಾನವೀಯತೆಯಿಂದ ಅವರನ್ನು ನೋಡಬೇಕು. ಆದ್ದರಿಂದ, ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಮತ್ತೊಮ್ಮೆ ಪರಿಗಣಿಸಬೇಕು. ಅಲ್ಲಿ clean ಮಾಡಬೇಡಿ ಎಂದು ಹೇಳುವುದಿಲ್ಲ. IT & BT city ಶುದ್ಧವಾಗಿರಬೇಕು, ಅದನ್ನು ಮಾಡಬೇಡಿ ಎಂದು ಹೇಳುವುದಿಲ್ಲ. They have been doing this business for more than 50 years. ಇದ್ದಕ್ಕಿದ್ದ ಹಾಗೆ ಅವರನ್ನು ಬೀದಿ ಪಾಲು ಮಾಡಿಬಿಟ್ಟರೆ ಆ ಕುಟುಂಬ ಎಲ್ಲಿ ಹೋಗಬೇಕು? ಬೇರೆ ಉದ್ಯೋಗ ಅವರಿಗೆ ಇರುವುದಿಲ್ಲ. ಬೇರೆ ಕಸುಬು ಇರುವುದಿಲ್ಲ. ಅವರಿಗೆ ಬಹಳ ಕಷ್ಟವಾಗುತ್ತದೆ. ಹಾಗಾಗಿ ಅವರು ಜೀವನದಲ್ಲಿ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಮಾನವೀಯತೆಯ ದೃಷ್ಟಿಯಿಂದ

ಮುಖ್ಯಮಂತ್ರಿಯವರು ನೋಡಿ, alternative arrangement ಮಾಡುವವರೆಗೆ ಅವರನ್ನು ಅಲ್ಲಿಯೇ ಮುಂದುವರಿಸಬೇಕೆಂಬುದು ನನ್ನ ಒತ್ತಾಯ. ದಯವಿಟ್ಟು ಇದನ್ನು consider ಮಾಡಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಬದಲಿ ವ್ಯವಸ್ಥೆ ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ, BBMP ಬದ್ಧವಾಗಿದೆ. ಆದಷ್ಟು ಬೇಗ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ. ನೀವು ಕೊಟ್ಟಂಥ ಸಲಹೆಗಳನ್ನು ಪರಿಶೀಲಿಸುತ್ತೇವೆ ಮತ್ತು ಅವರಿಗೆ ಸೂಕ್ತ ವ್ಯವಸ್ಥೆ ಮಾಡುವಂಥ ಪ್ರಯತ್ನಗಳನ್ನು ಮಾಡುತ್ತೇವೆ. ಈಗ ತಾತ್ಕಾಲಿಕವಾಗಿ ಬದಲಿ ವ್ಯವಸ್ಥೆ ಏನು ಮಾಡಬಹುದು ಎಂಬುದನ್ನು ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ನಾನು ಈಗ out-right ಆಗಿ reject ಮಾಡಿಲ್ಲ. ನಿಮ್ಮ ಸಲಹೆಗಳನ್ನು ನಾನು reject ಮಾಡಿಲ್ಲ. ನೋಡೋಣ, ಅಧಿಕಾರಿಗಳನ್ನು ಕರೆಸಿ, ಚರ್ಚಿಸಿ ಸೂಕ್ತ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ಹೇಳಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ. ತಕ್ಷಣ ಕರೆಸಿ ಮಾತನಾಡುತ್ತೇವೆಂದು ಹೇಳಿದ್ದಾರೆ. ಮಾತನಾಡಲಿಕ್ಕೂ ಅವಕಾಶ ಕೊಡದಿದ್ದರೆ ಹೇಗೆ? ಕರೆಸಿ ಮಾತನಾಡಲಿ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ : ಮಾನ್ಯ ಮುಖ್ಯಮಂತ್ರಿಯವರಿಗೆ ಕಾಳಜಿ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರಿಗೆ 2 ಕೋಟಿ ರೂ. ನಷ್ಟವಾಗಿದೆ. ಅವರಿಗೆ ಪರಿಹಾರವನ್ನಾದರೂ ಕೊಡಿಸಿ. ಅವರಿಗೆ ಜೀವನಕ್ಕೆ ಏನಾದರೂ ಬೇಕಲ್ಲವೆ? ನೀವು ನೋಡಿದ್ದೀರೋ ಏನೋ ಗೊತ್ತಿಲ್ಲ. ಅಲ್ಲಿ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದರು. ಅದಕ್ಕೆ investment ಮಾಡಿರುತ್ತಾರೆ. ಅದನ್ನೂ ವಾಪಸ್ಸು ಕೊಡಲಿಲ್ಲ, ತೆಗೆದುಕೊಂಡು ಹೋಗಿಬಿಟ್ಟರು. ಸುಮಾರು 2 ಕೋಟಿ ರೂ. ನಷ್ಟವಾಗಿದೆ ಎಂದು ಹೇಳುತ್ತಾರೆ. ಅದಕ್ಕೆ

ಅವರಿಗೆ ಪರಿಹಾರವನ್ನಾದರೂ ಕೊಡಬೇಕಲ್ಲವೆ? ಅವರು ಬದುಕಬೇಕಲ್ಲವೆ? ಅವರು loan ತೆಗೆದುಕೊಂಡಿರುತ್ತಾರೆ. ನೀವು ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನ ಮಾಡಿ. ನೀವು consider ಮಾಡಬೇಕು.

(ಗೊಂದಲ)

ಶ್ರೀ ಯು.ಟಿ. ಖಾದರ್ : ಮಲ್ಪೆ ಬೀಚ್‌ನಲ್ಲಿ ಮಾದಕ ದ್ರವ್ಯ ಸೇವನೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ನೋಟಿಸ್ ಕೊಡದೆ ನೇರವಾಗಿ ಪ್ರಸ್ತಾಪ ಮಾಡಿದರೆ ಹೇಗೆ? ಮಧ್ಯಾಹ್ನ ಪ್ರಸ್ತಾಪ ಮಾಡಿ.

(ಗೊಂದಲ)

ಅಧ್ಯಕ್ಷರು : ಇಲ್ಲ. ನೀವು ನೋಟಿಸ್ ಕೊಡದೆ ಡಿಢೀರ್ ಆಗಿ ಎದ್ದು ನಿಂತು ಹೇಳಿದರೆ ಹೇಗೆ? ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಅವಕಾಶವಿಲ್ಲ.

(ಗೊಂದಲ)

4. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಅಕ್ರಮವಾಗಿ ಕಬ್ಬಿಣದ ಅದಿರನ್ನು ರಫ್ತು ಮಾಡಿರುವ ಬಗ್ಗೆ ಲೋಕಾಯುಕ್ತವು ಸರ್ಕಾರಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದು ಸದರಿ ಗಣಿಗಾರಿಕೆಯಲ್ಲಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದು ಸಾವಿರಾರು ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವುದಾಗಿ ವರದಿಯಲ್ಲಿ ತಿಳಿಸಿದ್ದು, ಸದರಿ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ಅಂತಿಮ ವರದಿಯನ್ನು ದಿನಾಂಕ: 27.7.2011ರಲ್ಲಿ ಅಂದಿನ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್ ಎನ್. ಹೆಗ್ಡೆಯವರು ಮುಖ್ಯ